ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ ಗೃಹಮಂಡಳಿಗೆ ಭೂಸ್ವಾಧೀನ ಹಾಗೂ ಪರಿಹಾರ.

2828: (3737)

ಶ್ರೀ ಎಸ್.ಶಿವಣ್ಣ (ತುಮಕೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ ಗೃಹ ಮಂಡಳಿ ಭೂಸ್ವಾಧೀನ ಪ್ರಕ್ರಿಯೆ ಎಂದು ಪ್ರಾರಂಭಿಸಲಾಯಿತು; 4(1) 6(1)ರ ಅಧಿಸೂಚನೆಯನ್ನು ಎಂದು ಹೊರಡಿಸಲಾಯಿತು; ಅವಾರ್ಡ್ ಮಾಡಿದ ದಿನಾಂಕ ಯಾವುದು?

ಆ) ತುಮಕೂರು ನಗರದ ಶೆಟ್ಟಿಹಳ್ಳಿ ಗ್ರಾಮದಲ್ಲಿ 02-09-96 ರಂದು ಭೂಪರಿವರ್ತನೆಗೊಂಡ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದಿಂದ 07-03-87ರಂದು ಅನುಮೋದನೆ ಪಡೆದ ಸ.ನಂ. 15: 4ಬಿ ಹಾಗೂ 15: 6ರ 2-25 ಗುಂಟೆ ಜಮೀನನ್ನು ಕರ್ನಾಟಕ ಗೃಹ ಮಂಡಳಿ ಭೂಸ್ವಾಧೀನ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಜಮೀನಿಗೆ ನೀಡುವ ಪರಿಹಾರವನ್ನು ಯಾರ ಹೆಸರಿಗೆ ಅವಾರ್ಡ್ ಮಾಡಲಾಗಿದೆ?

ಈ) 1987ರಲ್ಲಿ 41 ನಿವೇಶನಗಳನ್ನು ವಿಂಗಡಿಸಿ ಮಾರಾಟ ಮಾಡಿದ್ದು, ಸದರಿ ನಿವೇಶನದ ಹಕ್ಕು ಹೊಂದಿರುವವರಿಗೆ ಮತ್ತು ಮನೆ ಕಟ್ಟಿರುವವರಿಗೆ ನೋಟೀಸು ನೀಡದೆ ಹಾಗೂ ಅವಾರ್ಡ್ ಮಾಡದೆ ಇರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಕರ್ನಾಟಕ ಗೃಹ ಮಂಡಳಿಯ ಸಂ.ಕಗೃಮಂ. ಭೂಸ್ವಾ 44: 91-92, ದಿನಾಂಕ 30-12-91 ರಲ್ಲಿ 4(1)ರ ಅಧಿಸೂಚನೆಯು ಅನುಮೋದನೆಗೊಂಡಿದ್ದು, ದಿನಾಂಕ 20-2-92ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಭೂಸ್ವಾಧೀನ ಕಾಯ್ದೆ ಕಲಂ 6(1)ರ ಅಧಿಸೂಚನೆಯ ಸಂಖ್ಯೆ: ಕಂ ಇ-59, ಭೂಸ್ವಾತು.93, ದಿನಾಂಕ 14-10-93ರಲ್ಲಿ ಸರ್ಕಾರದಿಂದ (ಕಂದಾಯ ಇಲಾಖೆ) ಅನುಮೋದನೆಗೊಂಡಿದ್ದು, ಸದರಿ ಅಧಿಸೂಚನೆಯು ದಿನಾಂಕ 4-11-93ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ದಿನಾಂಕ 14-6-96ರಲ್ಲಿ ಅವಾರ್ಡ್ ತಯಾರಿಸಿದ್ದು, ಸರ್ಕಾರದ ಪತ್ರದ ಸಂಖ್ಯೆ: ಆರ್‌ಡಿ: 104: ಭೂಸ್ವಾತು.96, ದಿನಾಂಕ 23-9-96ರಲ್ಲಿ ಸರ್ಕಾರದಿಂದ (ಕಂದಾಯ ಇಲಾಖೆ) ಅನುಮೋದನೆಗೊಂಡಿದೆ.

ಆ) ಭೂಪರಿವರ್ತನೆ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದಾಗಿರುತ್ತದೆ.

ಇ) ಸರ್ವೆ ನಂ. 15: 4ಬಿ ಮತ್ತು 15: 6 ರಲ್ಲಿನ 2 ಎಕರೆ 25 ಗುಂಟೆ ಜಮೀನಿಗೆ ಸಿದ್ಧಯರವರ ಹೆಸರಿಗೆ ಅವಾರ್ಡ್ ತಯಾರಿಸಲಾಗಿದ್ದು, ದಾಖಲಾತಿಗಳನ್ನು ಹಾಜರ್‌ಪಡಿಸಿದ ನಂತರ ಗಂಗಯ್ಯ ಬಿನ್ ಲೇಟ್ ಸಿದ್ಧಯ್ಯನವರಿಗೆ ಪರಿಹಾರ ಹಣವನ್ನು ದಿನಾಂಕ 12-11-97ರಂದು ಪಾವತಿಸಲಾಗಿದೆ.

ಈ) ಭೂಪರಿವರ್ತನೆ ಬಗ್ಗೆ ಆರ್.ಟಿ.ಸಿ.ಯಲ್ಲಿ ನಮೂದಾಗಿದೆ. ಆದರೆ ಅವಾರ್ಡ್ ವಿಚಾರಣೆಗೆ ಭೂಮಾಲೀಕರು ಹಾಜರ್ ಆಗಿರುವುದಿಲ್ಲ. ಅವಾರ್ಡ್ ನೋಟೀಸ್ ಪಡೆದು ದಿನಾಂಕ 25-9-97 ರಂದು ಸ.ನಂ. 15: 4ಬಿ ಹಾಗೂ 15: 6 ರಲ್ಲಿನ 2 ಎಕರೆ 25 ಗುಂಟೆ ಜಮೀನನ್ನು ಮಂಡಳಿಯ ವಶಕ್ಕೆ ನೀಡಿರುತ್ತಾರೆ. ಆ ಸಮಯದಲ್ಲಿ ಜಮೀನಿನಲ್ಲಿ ಯಾವುದೇ ಮನೆ ಕಟ್ಟಡ ಇರುವುದಿಲ್ಲ. ಭೂಮಾಲೀಕರು ಅಥವಾ ನಿವೇಶನದಾರರು ನಿವೇಶನ ವಿಂಗಡಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ.

ತುಮಕೂರು ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ತೊಂದರೆಯಾದವರಿಗೆ ಪರಿಹಾರ.

2829: (3738)

ಶ್ರೀ ಎಸ್.ಶಿವಣ್ಣ, (ತುಮಕೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1995-96ನೇ ಸಾಲಿನಿಂದ ಇಲ್ಲಿಯವರೆಗೂ ಅತಿವೃಷ್ಟಿ ದುರಂತ ಪರಿಹಾರ ಬಾಬ್ತಿಗೆ ಬಿಡುಗಡೆ ಮಾಡಿರುವ ಮೊಬಲಗೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಿಂದ ಪರಿಹಾರ ಪಡೆದ ತುಮಕೂರು ಜಿಲ್ಲೆಯ ಫಲಾನುಭವಿಗಳ ಸಂಖ್ಯೆ ಎಷ್ಟು?

ಇ) 1998-99ನೇ ಸಾಲಿನಲ್ಲಿ ತುಮಕೂರು ತಾಲ್ಲೂಕಿನಲ್ಲಿ ಅತಿವೃಷ್ಟಿ ದುರಂತದಿಂದ ತೊಂದರೆ ಹೊಂದಿದ ಕುಟುಂಬಗಳ ಸಂಖ್ಯೆ ಎಷ್ಟು? ಅವರುಗಳಿಗೆ ನೀಡಿದ ಪರಿಹಾರ ಮೊತ್ತವೆಷ್ಟು?

ಈ) ಕಸಬ ಹೋಬಳಿ ನರಸಾಪುರ ಗ್ರಾಮದ ಜನರಿಗೆ ಈ ವರ್ಷದಲ್ಲಿ ಅತಿವೃಷ್ಟಿಯಿಂದ ಆದ ತೊಂದರೆಗೆ ಸರ್ಕಾರ ಪರಿಹಾರ ಹಾಗೂ ಬೆಳೆ ಪರಿಹಾರ